


## ಇ- ರಿಕ್ಷಾಗಳು ಏಕಿಲ್ಲ?

ಮೈಸೂರು ನಗರದೊಳಗೆ ಕೇವಲ ಒಂದು ಕಿ.ಮೀ ವ್ಯಾಪ್ತಿಯಲ್ಲಿ (ಮೈಸೂರು ಅರಮನೆಯನ್ನು ಹೊರತುಪಡಿಸಿ) ಸುಮಾರು 16ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳಿವೆ. ಈ ಕಟ್ಟಡಗಳನ್ನು ಬೆಳಿಗ್ಗೆಯ ಸೂರ್ಯೋದಯದ ಮತ್ತು ಸಂಜೆಯ ಸೂರ್ಯಾಸ್ತದ ಬೆಳಕಿನಲ್ಲಿ ವೀಕ್ಷಿಸುವುದೇ ಒಂದು ವಿಭಿನ್ನ ಅನುಭವ. ನಾವು ವಿದ್ಯುತ್ ದೀಪಗಳಿಂದ ಅಲಂಕೃತವಾಗಿರುವ ಅರಮನೆಗಳನ್ನು ನೋಡಿ ಬೆರಗುಗೊಳ್ಳುತ್ತೇವೆ. ಆದರೆ ನೈಸರ್ಗಿಕ ಸೂರ್ಯನ ಬೆಳಕಿಗೆ ಹೊಂಬಣ್ಣದಿಂದ ಈ ಅರಮನೆಗಳು ಕಳೆಗಟ್ಟುವುದನ್ನು ನೋಡಿ ನಮಗೆ ಗೊತ್ತೇ ಇಲ್ಲ. ಈ ಅರಮನೆಯ ಕಟ್ಟಡಗಳ ಮೇಲೆ ಪರಿಸರ ಮಾಲಿನ್ಯದ ದುಷ್ಪರಿಣಾಮವೇನು ಎನ್ನುವ ಬಗ್ಗೆ ಅಧ್ಯಯನವೂ ನಡೆದಿಲ್ಲ. ಆಗ್ರಾದಲ್ಲಿ ತಾಜ್‌ಮಹಲ್‌ನ ಸೌಂದರ್ಯವನ್ನು ಉಳಿಸಲು ಸುತ್ತಮುತ್ತ ಪೆಟ್ರೋಲ್, ಡೀಸೆಲ್ ಮತ್ತಿತರ ಇಂಧನದ ವಾಹನಗಳನ್ನು ನಿಷೇಧಿಸಲಾಗಿದೆ. ಇ–ರಿಕ್ಷಾಗಳನ್ನು ಕಡ್ಡಾಯಗೊಳಿಸಲಾಗಿದೆ. ನೂರಾರು ಇ–ರಿಕ್ಷಾಗಳು ಆಗ್ರಾದಲ್ಲಿ ಪರಿಸರ ಮಾಲಿನ್ಯವನ್ನು ಯಶಸ್ವಿಯಾಗಿ ತಡೆದಿವೆ. ಒಂದೂವರೆ ಲಕ್ಷ ರೂಪಾಯಿಗೆಲ್ಲ ಸಿಗುವ ಈ ಬ್ಯಾಟರಿ ಚಾಲಿತ ರಿಕ್ಷಾಗಳಲ್ಲಿ ಹೆಚ್ಚು ಜನರೂ ಓಡಾಡಬಹುದು; ನಿರ್ವಹಣಾ ವೆಚ್ಚವೂ ಕಡಿಮೆ! ಮೈಸೂರಿನಲ್ಲೂ ಅಂತಹ ಪ್ರಯೋಗವನ್ನು ಏಕೆ ಮಾಡಬಾರದು? ಪರಿಸರ ಟೂರಿಸಂ ಎಂದರೆ, ಕೇವಲ ಕಾಡು ರಕ್ಷಣೆ ಮಾತ್ರವಲ್ಲ, ವಾಯು ಮಾಲಿನ್ಯದಿಂದ ನಮ್ಮ ಪಾರಂಪರಿಕ ಕಟ್ಟಡಗಳನ್ನು ರಕ್ಷಿಸುವುದೂ ಹೌದು.

### ಆದಾಯ 8 ಪಟ್ಟು ಹೆಚ್ಚಳ

ಮೈಸೂರು ಭಾಗದಲ್ಲಿ ಅರಣ್ಯ ಪ್ರವಾಸೋದ್ಯಮದಿಂದ ವಾರ್ಷಿಕ ಅಂದಾಜು 25 ಕೋಟಿ ರೂಪಾಯಿ ಆದಾಯವಿದೆ. ಆದರೆ ಈ ಆದಾಯ ತಂದುಕೊಡುವ ಈಗಿನ ಸಫಾರಿಗಳ ಸ್ವರೂಪವೇನು? ಕಾಡಿನಲ್ಲಿ ಪ್ರಾಣಿಗಳನ್ನು ತೋರಿಸಿ ಹಣ ಮಾಡುವುದು, ರೆಸಾರ್ಟ್‌ಗಳಲ್ಲಿ ಪ್ರವಾಸಿಗಳನ್ನು ಸೇರಿಸಿ ಹಣ ಮಾಡುವುದು. ಇದನ್ನು ಇನ್ನಷ್ಟು ವಿಭಿನ್ನವಾಗಿ, ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಮಾಡಬೇಕಾದ ಅಗತ್ಯವಿದೆಯಷ್ಟೇ.

ಮೈಸೂರನ್ನು ಕೇಂದ್ರವಾಗಿಟ್ಟುಕೊಂಡು ಪರಿಸರ ಪ್ರವಾಸೋದ್ಯಮವನ್ನು ಬೆಳೆಸಿದ್ದೇ ಆದಲ್ಲಿ ಇಲ್ಲಿನ ಪ್ರವಾಸೋದ್ಯಮದ ಆದಾಯವನ್ನು ಎಂಟು ಪಟ್ಟು ಹೆಚ್ಚಿಸುವ ಸಾಧ್ಯತೆ ಇದೆ. ಮೈಸೂರು ಸುತ್ತಮುತ್ತಲೂ ಉತ್ತಮ ಕೆರೆಗಳನ್ನು ಗುರುತಿಸಿ, ಅಲ್ಲಿ ಚಳಿಗಾಲದಲ್ಲಿ ಬರುವ ಪಕ್ಷಿಗಳನ್ನು ವೀಕ್ಷಿಸಲೆಂದೇ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬಹುದು. ವಿಶ್ವದ ಅನೇಕ ಭಾಗಗಳಲ್ಲಿ ಈ ರೀತಿಯ ಪ್ರಯತ್ನಗಳು ಯಶಸ್ಸು ಕಂಡಿವೆ. ಇದರಿಂದ ಎರಡು ರೀತಿಯ ಲಾಭಗಳಿವೆ. ಪರಿಸರವೂ ಉಳಿಯುತ್ತದೆ; ಆದಾಯವೂ ಹೆಚ್ಚುತ್ತದೆ.

ಆದಾಯ ಕೇವಲ ಪ್ರವಾಸೋದ್ಯಮದ ಒಂದು ಭಾಗದಿಂದ ಮಾತ್ರ ಬರುವಂಥದ್ದಲ್ಲ. ಈಗ ವಾರ್ಷಿಕವಾಗಿ 25 ಕೋಟಿ ರೂಪಾಯಿಗಳಷ್ಟು ವಹಿವಾಟು ನಡೆಯುತ್ತಿದೆ ಎಂಬುದು ಒಂದು ಅಂದಾಜು. ಇದು ರೆಸಾರ್ಟ್‌ಗಳಿಂದ ಬರುತ್ತದೆ ಎಂದುಕೊಳ್ಳೋಣ. ಆದರೆ, ಅದರ ವ್ಯಾಪ್ತಿ ಇನ್ನೂ ಹೆಚ್ಚಿರುತ್ತದೆ. ಸಾರಿಗೆ ಉದ್ಯಮ ಚೇತರಿಸಿಕೊಳ್ಳುತ್ತದೆ, ಹೋಟೆಲ್ ಉದ್ಯಮ ವೃದ್ಧಿಸುಸತ್ತದೆ. ಸ್ಥಳೀಯರನ್ನೇ ಈ ಯೋಜನೆಗೆ ಬಳಸಿಕೊಳ್ಳುವ ಕಾರಣ, ಅನೇಕ ಮಂದಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಇದರಿಂದ ಪರಿಸರ ಉಳಿಸಲು ಸ್ಥಳೀಯರು ಮುಂದಾಗುತ್ತಾರೆ.

ದಸರಾ ಉತ್ಸವದ ಸಂದರ್ಭದಲ್ಲಿ ಮೈಸೂರು ಲಕ್ಷಾಂತರ ಜನರ ಆಕರ್ಷಣೆಯ ಕೇಂದ್ರವಾಗುತ್ತದೆ. ದಸರಾದ ಹೊರತಾಗಿಯೂ ಮೈಸೂರು ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ ಬೆಳೆಯಬೇಕಿದ್ದರೆ ಪರಿಸರ ಟೂರಿಸಂ ಒಂದು ಮುಖ್ಯ ದಾರಿ. ಜೀವವೈವಿಧ್ಯದ ರಕ್ಷಣೆಯ ಜತೆಗೇ ಅದನ್ನು ಪ್ರವಾಸದ ಬಂಡವಾಳವನ್ನಾಗಿ ಮಾಡುವ ಕಲೆಯನ್ನು ನಾವು ಕಲಿತುಕೊಳ್ಳಬೇಕು. ಕೇವಲ ಹಿನ್ನೀರನ್ನೇ ಬಳಸಿಕೊಂಡು ಪಕ್ಕದ ರಾಜ್ಯ ಕೇರಳ, ಜಗತ್ತಿನಾದ್ಯಂತ ಪ್ರವಾಸಿಗರನ್ನು ಆಕರ್ಷಿಸುತ್ತಿರುವುದನ್ನು ನೋಡಿ ನಾವು ಕನ್ನಡಿಗರೂ ಕಲಿತುಕೊಳ್ಳುವುದು ಸಾಕಷ್ಟಿದೆ.

**(ಮಾಹಿತಿ: ಕೃಪಾಕರ- ಸೇನಾನಿ)**